ಈ) ರೈಲ್ವೆ ಇಲಾಖೆಯು ಕೆಲಸ ನಿರ್ವಹಿಸುತ್ತಿರುವುದರಿಂದ ನೈರುತ್ಯ ರೈಲ್ವೆ ಇಲಾಖೆ ಟೆಂಡರ್ ನಿಯಮಾನುಸಾರ ಕ್ರಮ ಕೈಗೊಳ್ಳುತ್ತದೆ.

ಉ) ಕಾಮಗಾರಿ ನಡೆಯುವ ಸ್ಥಳದಲ್ಲಿ ಇರುವ ನೀರಿನ ಕೊಳವೆ, ಒಳಚರಂಡಿ ವ್ಯವಸ್ಥೆ, ಓ.ಎಫ್.ಸಿ. ಕೇಬಲ್, ಬೆಸ್ಕಾಂನ ಕೇಬಲ್, ಪಿ ಅಂಡ್ ಟಿ ಕೇಬಲ್‌ಗಳನ್ನು ಸ್ಥಳಾಂತರಿಸಬೇಕಾದ್ದರಿಂದ ಹಾಗೂ ವಾಹನಗಳಿಗೆ ಬದಲಿ ಸಂಚಾರ ವ್ಯವಸ್ಥೆ ಮಾಡಿರುವುದರಿಂದ ವಿಳಂಬವಾಗಿರುತ್ತದೆ.

ಊ) ದಿನಾಂಕ 10.2.2005ರಂದು ಆರ್.ಓ.ಬಿ ಯನ್ನು ಸಾರ್ವಜನಿಕ ವಾಹನ ಸಂಚಾರಕ್ಕೆ ಪ್ರಾಯೋಗಿಕವಾಗಿ ಬಿಟ್ಟು ಕೊಡಲು ಯೋಜಿಸಲಾಗಿದೆ.

992(838) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಿರ್ಮಲ ಶೌಚಾಲಯಗಳಲ್ಲಿ ಫಲಾನುಭವಿಗಳಿಂದ ಶುಲ್ಕ ವಸೂಲಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಮೂಹ ಸೌಲಭ್ಯದ ದೃಷ್ಟಿಯಿಂದ ಶೌಚಾಲಯಗಳ ನಿರ್ವಹಣಾ ವೆಚ್ಚವನ್ನು ಮಹನಗರ ಪಾಲಿಕೆಯೇ ಭರಿಸಬಹುದೆ;

ಆ) ಮಹಾನಗರ ಪಾಲಿಕೆ ನಿರ್ವಹಣಾ ವೆಚ್ಚವನ್ನು ಭರಿಸುವಲ್ಲಿ ಇರುವ ಅಡಚಣೆಗಳೇನು ;

ಇ) ನಿರ್ವಹಣಾ ವೆಚ್ಚ ಭರಿಸುವಲ್ಲಿ ಉದ್ಭವಿಸುವ ಅಡಚಣೆಗಳ ನಿವಾರಣೆಗೆ ಪಾಲಿಕೆ ನಿರ್ದಿಷ್ಟ ಕ್ರಮಗಳನ್ನು ರೂಪಿಸಿದೆಯೇ;

ಈ) ರೂಪಿಸಿದ್ದರೆ ಅಂತಹ ಕ್ರಮಗಳ ಸಂಕ್ಷಿಪ್ತ ವಿವರಗಳೇನು;

ಉ) ಅದಕ್ಕೆ ಸಕಾರಣಗಳೇನು;

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ' ನಿರ್ಮಲ ಬೆಂಗಳೂರು' ಯೋಜನೆಯಡಿ ನಿರ್ಮಿಸಿರುವ ಶೌಚಾಲಯಗಳನ್ನು ಬಿಎಟಿಎಫ್ ಸಹಯೋಗದೊಂದಿಗೆ ರೂಪು ರೇಷೆಗೊಂಡಿದ್ದು, ಇನ್‌ಫೋಸಿಸ್ ಫೌಂಡೇಷನ್ ವತಿಯಿಂದ 'ಪಾವತಿಸಿ--ಉಪಯೋಗಿಸಿ' ಆಧಾರದ ಮೇಲೆ ಬಹುಕಾಲ ನಿರಂತರವಾಗಿ ನಿರ್ವಹಿಸಲು ನಿರ್ಮಿಸಲ್ಪಟ್ಟಿರುತ್ತವೆ. ಪ್ರಸ್ತುತ ಅಂತಹ 108 ಶೌಚಾಲಯಗಳು ಯೋಜನೆಯ ಹಂತದಲ್ಲಿರುತ್ತವೆ. ಸದರಿ ಶೌಚಾಲಯಗಳನ್ನು ಖಾಸಗಿ ಸಂಸ್ಥೆಯು ನಿರ್ವಹಿಸುತ್ತಿದ್ದು, ಪಾಲಿಕೆಯಿಂದ ನಿರ್ವಹಣಾ ವೆಚ್ಚವನ್ನು ಭರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

993(839) ಶ್ರೀ ನಿರ್ಮಲ್ ಸುರಾನ, (ಭಾರತೀನಗರ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ವಿಶೇಷ ಆರ್ಥಿಕ ಅನುದಾನ ನೀಡಲು ಅಳವಡಿಸಿಕೊಂಡಿರುವ ಮಾನದಂಡ ಮತ್ತು ಮಾರ್ಗಸೂಚಿಗಳೇನು;